**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 623/2023**

| | | |
|---|---|---|
| ಸಾಕ್ಷಿಯ ಹೆಸರುಃ | ಚಂದ್ರೇಗೌಡ | ಫ್ರಾಸಾಃಃ 3 |
| ತಂದೆ ಹೆಸರುಃ | ನಿಂಗೇಗೌಡ | ಚಾಸಾಃಃ 6 |
| ವಯಸ್ಸುಃ | 38 ವರ್ಷ | ಪ್ರಮಾಣೀಕರಿಸಿದ<br>ದಿಃ 15/12/2025 |
| ಉದ್ಯೋಗಃ | ಖಾಸಗಿ ಉಪನ್ಯಾಸಕರು | |
| ವಾಸ ಸ್ಥಳಃ | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ಚಾಸಾ-1 ನನ್ನ ತಂದೆ. ದಿಃ 20.09.2023 ರಂದು ನಾನು ಮೈಸೂರಿನಿಂದ ನನ್ನ ಸ್ವಂತ ಸ್ಥಳವಾದ ಮಂಟಿ ಬಿಳಗುಳಿ ಗ್ರಾಮಕ್ಕೆ ಬಂದಿದ್ದೆ. ದಿಃ 21.09.2023 ರಂದು ಮ 1.30 ಗಂಟೆ ಸಮಯಕ್ಕೆ ನನ್ನ ತಂದೆ ಗಾಬರಿಯಿಂದ ಮನೆಗೆ ಬಂದರು. ಅವರನ್ನು ನೋಡಿದಾಗ ಅವರ ಬಲಗೈ ಊತ ಬಂದಿತ್ತು. ಅವರ ಬಟ್ಟೆ ಎಡಗಡೆ ಹರಿದಿತ್ತು. ಅವರ ಎಡ ಪಕ್ಕೆಯ ಬಳಿ ರಕ್ತ ಹೆಪ್ಪು ಕಟ್ಟಿದಂತೆ ಇತ್ತು. ನಾನು ಅವರಿಗೆ ಸಮಾಧಾನ ಪಡಿಸಿ ಕೇಳಿದಾಗ ಸುಮಾರು 1.00 ಗಂಟೆ ಸಮಯದಲ್ಲಿ ಊರಿನ ಸಮೀಪದ ಸರಕಾರಿ ಜಾಗವಾದ ಮಂಟಿಯಲ್ಲಿ ದನ ಮೇಯಿಸುತ್ತಿದ್ದಾಗ ಆರೋಪಿತರು ಜಗಳಕ್ಕೆ ಬಂದರು ಎಂದು ತಿಳಿಸಿದರು. ಆಗ 2 ನೇ ಆರೋಪಿತ ದನ ಮೇಯಿಸಲು ಏಕೆ ಮಂಟಿಗೆ ಬರುತ್ತೀಯಾ, ಮಂಟಿ ನಿಮ್ಮ ಅಪ್ಪಂದ ಎಂದು ಚಾಸಾ-1 ರವರನ್ನು ಬೋಳಿ ಮಗನೇ , ಸೂಳೇ ಮಗನೇ ಎಂದು ಬೈದು ಗಟ್ಟಿಯಾಗಿ ತಬ್ಬಿ ಹಿಡಿದುಕೊಂಡರು, ಅಲ್ಲೇ ಇದ್ದಂತಹ 1 ನೇ ಆರೋಪಿತ ಸಹ ಚಾಸಾ-1 ರವರಿಗೆ ಬೋಳಿ ಮಗನೇ, ಸೂಳೇ

ಮಗನೇ ಎಂದು ಬೈದು ಬಲಮುಷ್ಟಿಯಿಂದ ಎಡ ಪಕ್ಕೆಗೆ ಬಲಭುಜಕ್ಕೆ ಮತುತ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತಾರೆ, 1 ನೇ ಆರೋಪಿತ ಕಲ್ಲಿನಿಂದ ಚಾಸಾ-1 ರವರಿಗೆ ಹೊಡೆಯಲು ಬಂದಾಗ ಚಾಸಾ-1 ರವರು ಬಲಗೈನಿಂದ ತಡೆಯಲು ಹೋದಾಗ ಕಲ್ಲು ಬಲಗೈ ಹೆಬ್ಬೆರಳಿನ ಹಿಂಭಾಗಕ್ಕೆ ತಗುಲಿ ಮೂಳೆ ಮುರಿದಿರುತ್ತದೆ, ಚಾಸಾ-1 ರವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಆರೋಪಿತರು ಮುಂದೆ ಹೋಗದಂತೆ ತಡೆದಿರುತ್ತಾರೆ, 2 ನೇ ಆರೋಪಿತ 1 ವರೆ ಅಡಿ ಉದ್ದದ ದೊಣ್ಣೆಯಿಂದ ಚಾಸಾ-1 ರ ವರ ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ. ಅಕ್ಕಪಕ್ಕದ ಜನರು ಬಂದಾಗ ಆರೋಪಿತರು ಚಾಸಾ-1 ರವರನ್ನು ನೂಕಿ ಕೆಳಗೆ ಬೀಳಿಸಿ ನಡೆ ಘಟನಯನ್ನು ಯಾರಿಗಾದರೂ ತಿಳಿಸಿದರೆ ಚಾಸಾ-1 ರವರನ್ನು ಅಲ್ಲದೇ ಇಡೀ ಕುಟುಂಬದವರನ್ನು ಕೊಲೆ ಮಾಡುತ್ತೇವೆಂದು ಕೊಲೆ ಬೆದರಿಕೆ ಹಾಕಿದರು ಎಂದು ತಿಳಿಸಿರುತ್ತಾರೆ. ಹೋಗುವಾಗ ಅಲ್ಲೇ ಕಲ್ಲು ಮತ್ತು ದೊಣ್ಣೆಯನ್ನು ಬಿಸಾಡಿ ಹೋದರು ಎಂದು ತಿಳಿಸಿರುತ್ತಾರೆ. ಆ ದಿನ ಊರಿನಲ್ಲಿ ರಾಜೀ ಪಂಚಾಯಿತಿ ಮಾಡಿಕೊಳ್ಳೋಣ ಮತ್ತು ಅಷ್ಟಾಗಿ ನೋವು ಉಂಟಾಗಿಲ್ಲ ಎಂದು ಬಾವಿಸಿ ತಕ್ಷಣ ದೂರನ್ನು ನೀಡದೇ ಆ ದಿನ ರಾತ್ರಿ ಮನೆಯಲ್ಲೇ ಉಳಿದುಕೊಂಡೆವು. ರಾತ್ರಿ ಚಾಸಾ-1 ರವರು ನರಳಾಡುತ್ತಿದ್ದು ಮಾರನೇ ದಿನ ದಿಃ 22.09.2023 ರಂದು ಬೆಳಿಗ್ಗೆ ಕುಶಾಲನಗರದ ಖಾಸಗಿ ಆಸ್ಪತ್ರೆ ಗೆ ಸೇರಿಸಲು ಹೋದಾಗ ಅವರು ದಾಖಲಿಸಿಕೊಳ್ಳದಿದ್ದಾಗ ಮಡಿಕೇರಿ ಸರಕಾರಿ ಆಸ್ಪತ್ರೆಗೆ ದಾಖಲಿಸಿದೆವು. ಸಿಟಿ ಸ್ಕ್ಯಾನ್ ಮಾಡಿದ ನಂತರ ಮೂಳೆ ಮುರಿತ ಮತ್ತು ಆದಂತಹ ಗಾಯಗಳನ್ನು ಖಚಿತಪಡಿಸಿಕೂಂಡು ವೈದ್ಯರು ಎಂಎಲ್ ಸಿ ರಿಜಿಸ್ಟರ್ ಮಾಡಿ ಚಿಕಿತ್ಸೆ ನೀಡಿದರು. ನಾನು ಚಾಸಾ-1 ರವರಿಗೆ ಚಿಕಿತ್ಸೆ ಕೊಡಿಸಿ ಚಾಸಾ-1 ರವರನ್ನೂ ಸಹ ತಡ ರಾತ್ರಿ ಠಾಣೆಗೆ ಕರೆದುಕೂಂಡು ಬಂದು ಪೋಲೀಸರಿಗೆ ಘಟನಾ ಬಗ್ಗೆ ತಿಳಿಸಿ ಪೋಲೀಸರು ಚಾಸಾ-1 ರವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿದರು. ಈ ಬಗ್ಗೆ ನಾನು ಪೋಲೀಸರಿಗೆ ನನ್ನ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಡಿ ಪಿ ಎಲ್ ವಕೀಲರಿಂದಃ**

ಗಲಾಟೆ ನಡೆಯುವಾಗ ಕೆಂಪಣ್ಣ, ಜ್ಯೋತಿ, ಭದ್ರಮ್ಮ ಮತ್ತು ಕರಿಗೌಡರವರು ಹಾಜರಿದ್ದರು ಎಂದು ಚಾಸಾ-1 ರವರು ತಿಳಿಸಿದ್ದರು. ಸದರಿಯವರು ಕಾಣಿಸುವಷ್ಟು ದೂರದಲ್ಲಿದ್ದರು ಎಂದು ನುಡಿದಿದ್ದರು. ಜಗಳವನ್ನು ಯಾರು ಬಿಡಿಸಲಿಲ್ಲ ಎಂದು ತಿಳಿಸಿದ್ದರು. ಆ ದಿನ ನಾನು ಮನೆಯಲ್ಲೇ ಇದ್ದೆ. ನನ್ನ ತಂದೆ ಮನೆಗೆ ಬಂದಾಗ ಮ.1.30 ಗಂಟೆ ಆಗಿತ್ತು. ಹರಿದಿರುವಂತಹ ಬಟ್ಟೆಯನ್ನು ಪೋಲೀಸರಿಗೆ ತೋರಿಸಿದ್ದೆವು. ಚಾಸಾ-1 ರವರ ಬಲಗೈಗೆ ರಕ್ತಗಾಯವಾಗಿತ್ತು. ಬಟ್ಟೆಯ ಮೇಲೆ ರಕ್ತದ ಕಲೆಯಾಗಿರಲಿಲ್ಲ. ಮಾರನೇ ದಿನ ಬೆಳಿಗ್ಗೆ 10.00-10.30 ಗಂಟೆಗೆ ಮಡಿಕೇರಿ ಸರಕಾರಿ ಆಸ್ಪತ್ರೆಗೆ ಹೋದೆವು. ಕುಶಾಲನಗರದ ಬಸ್ ನಿಲ್ದಾಣದ ಸಮೀಪ ಇರುವ ಖಾಸಗಿ ಆಸ್ಪತ್ರೆಗೆ ಮೊದಲು ಹೋದೆವು. ಆಗ ಸಮಯ ಬೆ 8.00-8.30 ಗಂಟೆ ಆಗಿತ್ತು. ಘಟನಾ ಬಗ್ಗೆ ಜಗಧೀಶ, ನಾಗೇಗೌಡ ಮತ್ತು ಗಿರೀಶ ರವರಿಗೆ ತಿಳಿಸಿ ಗ್ರಾಮ ಪಂಚಾಯಿತಿ ಮಾಡಲು ತಿಳಿಸಿದ್ದೆವು. ದೂರು ದಾಖಲಿಸಿದ ನಂತರ ಸದರಿಯವರಿಗೆ ಪಂಚಾಯಿತಿ ಮಾಡಲು ತಿಳಿಸಿದ್ದೆವು. ಅವರಿಗೆ ಪಂಚಾಯಿತಿ ಮಾಡಲು ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ದೂರು ದಾಖಲಿಸಿದ ನಂತರ ಪಂಚಾಯಿತಿ ಮಾಡಿಸಬೇಕು ಎಂದು ಸದರಿಯವರಿಗೆ ತಿಳಿಸಿದ ಬಗ್ಗೆ ಹೇಳಿಕೆಯಲ್ಲಿ ತಿಳಿಸಿಲ್ಲ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ದೂರನ್ನು ಠಾಣೆಯಲ್ಲಿ ಬರೆದು ಚಾಸಾ-1 ರವರು ನೀಡಿರುತ್ತಾರೆ. ದೂರನ್ನು ಚಾಸಾ-1 ರವರ ಹೇಳಿಕೆ ಮೇರೆಗೆ ಹೆಚ್ ಸಿ - ಕುಮಾರ್ ಎಂಬ ಪೋಲೀಸರು ಬರೆದರು. ಆಗ ನಾನು ಸಹ ಇದ್ದೆ. ಸದರಿ ಕುಮಾರ್ ರವರೇ ದೂರನ್ನು ದಾಖಲಿಸಿದರು. ನನಗೆ ದೂರನ್ನು ಬರೆಯಲು ತೊಂದರೆ ಇರಲಿಲ್ಲ. ಪೋಲೀಸರು ದೂರನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ದೂರನ್ನು ದಾಖಲಿಸಿದಾಗಲೇ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ನನ್ನ ಹೇಳಿಕೆಯನ್ನು ದೂರನ್ನು ದಾಖಲಿಸುವಾಗ ನೀಡಿಲ್ಲ ಎಂದರೆ

ಸರಿಯಲ್ಲ. ನನ್ನ ಹೇಳಿಕೆಯನ್ನು ನಾನು ಓದಿ ಸಹಿ ಮಾಡಿದ್ದೇನೆ. ಆರೋಪಿತರು ನನ್ನ ತಂದೆಯ ಮೇಲೆ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಗಲಾಟೆಯನ್ನು ಮೇಲ್ಕಂಡವರು ನೋಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವ ಭಾಗದಲ್ಲೂ ನೋವುಂಟು ಆಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತಟು ಘಟನಾ ಸ್ಥಳ ಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರಿಗೂ ವೈಯಕ್ತಿಕ ದ್ವೇಷ ಇದೆ ಎಂದರೆ ಸರಿಯಲ್ಲ. ಆ ದ್ವೇಷದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಬಟ್ಟೆ ಹರಿದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಗಲಾಟೆ ಆದ ಬಗ್ಗೆ ನನಗೆ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**